ತಾರೀಖಿನಲ್ಲಿ ಹಣ ತೆಗೆದುಕೊಂಡಿದ್ದಾರೆ, ಯಾರು ಅಡ್ವಾನ್ಸ್ ಮಾಡಿದ್ದಾರೆ ಎನ್ನುವ ಮಾಹಿತಿಯೂ ನನ್ನ ಹತ್ತಿರ ಇದೆ. ಮತ್ತು ಅದರ ಅಧ್ಯಕ್ಷರು ಇರಬಹುದು, ಸೆಕ್ರೆಟರಿಗಳು ಇರಬಹುದು, ಮ್ಯಾನೇಜರ್ ಇರಬಹುದು, ಡೈರಕ್ಟರು ಇರಬಹುದು ಮತ್ತು ಮೆ. ಮಹೇಂದ್ರ ಎಂಟರ್‌ಪೈನರ್ಸ್ ಇವರೆಲ್ಲಾ ಕೂಡಿ ಮಾಡಿದಂತಹ ಕೆಲಸ ಆಗಿದೆ ಎನ್ನತಕ್ಕಂಥಾದ್ದು ಮೇಲ್ನೊಟಕ್ಕೆ ನಮಗೆ ಕಾಣುತ್ತದೆ. ಮತ್ತು ರೆಕಾರ್ಡ್ ಪ್ರಕಾರವೂ ಕೂಡ ನಮಗೆ ಗೊತ್ತಾಗಿದೆ. ಆದ್ದರಿಂದ ಸಂಪೂರ್ಣವಾಗಿ ತನಿಖೆ ನಡೆಸಿ ಮ್ಯಾನೇಜರ್ ಅಥವಾ ಸೆಕ್ರೆಟರಿ ಟಿ.ಎ.ಪಿ.ಎಂ.ಸಿ. ಇದ್ದಾರೆ. ಅವರ ಮೇಲೂ ಕ್ರಮ ತೆಗೆದುಕೊಳ್ಳುತ್ತೇನೆ. ಒಂದು ವೇಳೆ ಇದರಲ್ಲಿ ಅಧ್ಯಕ್ಷರು ಇನ್‌ವಾಲ್ವ್ ಆಗಿದ್ದರೆ, ಡೈರೆಕ್ಟರ್ಸ್ ಇನ್‌ವಾಲ್ವ್ ಆಗಿದ್ದರೆ ಅವರ ಮೇಲೂ ಕೂಡ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇನೆ. ಇದರಲ್ಲಿ ಹಿಂದೆ ಮುಂದೆ ನೋಡುವ ಹಾಗೆ ಇಲ್ಲ. ಇದರಲ್ಲಿ ಯಾರಿಗೂ ಪ್ರೊಟೆಕ್ಷನ್ ಕೊಡತಕ್ಕಂಥ ಪ್ರಶ್ನೆಯೂ ಬರುವುದಿಲ್ಲ. ಈ ರೀತಿಯಿಂದ ನಾವು ಸಂಸ್ಥೆಗಳನ್ನು ನಡೆಸಿಕೊಂಡು ಹೋದರೆ ಯಾವ ಸಂಸ್ಥೆಗಳೂ ಉದ್ಧಾರವಾಗುವುದಿಲ್ಲ. ಇದು 1986ರಲ್ಲಿ ಕ್ಲೋಸ್ ಆಗಿತ್ತು. ಕ್ಲೋಸ್ ಆಗಿದ್ದನ್ನು ನಾವು ಪುನರ್‌ಜೀವ ತುಂಬಿ ಸ್ವಲ್ಪ ಹಣ ಸಂಗ್ರಹ ಮಾಡಿ ರಿಪೇರಿ ಮಾಡಿ ನಡೆಸತಕ್ಕಂಥ ವ್ಯವಸ್ಥೆ ಮಾಡಿದ್ದೇವೆ ಎನ್ನತಕ್ಕಂಥಾ ವಾದ ಒಂದು ಕಡೆ ಇದ್ದರೆ ಯಾವ ರೀತಿಯಾಗಿ ಅವರು ಕ್ರಮಬದ್ಧವಾಗಿ ಮಾಡಬೇಕಾಗಿತ್ತೋ ಕಾನೂನು ರೀತಿಯಾಗಿ ಮಾಡಬೇಕಾಗಿತ್ತೋ ಆ ರೀತಿಯಾಗಿ ಮಾಡಿಲ್ಲ ಎನ್ನತಕ್ಕಂಥಾದ್ದು ಇನ್ನೊಂದು ಕಡೆ ಕಂಡು ಬಂದಿದೆ. ಅದಕ್ಕಾಗಿ ಇದರ ಬಗ್ಗೆ ಎನ್‌ಕ್ವರಿ ಮಾಡಿಸಿ ಸಂಬಂಧಪಟ್ಟವರಿಗೆ ಶಿಕ್ಷೆ ಕೊಡತಕ್ಕಂಥ ವ್ಯವಸ್ಥೆ ಮಾಡುತ್ತೇನೆ.

2. 1992ರ ಡಿಸೆಂಬರ್‌ನಲ್ಲಿ ಆಂಧ್ರಪ್ರದೇಶದ ವಿಜಯವಾಡದಲ್ಲಿ ನಡೆದ ಅಖಿಲ ಭಾರತ ರಾಷ್ಟ್ರೀಯ ಕ್ರೀಡಾ ಸ್ಪರ್ಧೆಗೆ ಕರ್ನಾಟಕದಿಂದ ಆಯ್ಕೆಯಾಗಿದ್ದ ಶ್ರೀ ಕಿಶೋರ್ ಎಂಬುವವರಿಗೆ ಅವಕಾಶ ನಿರಾಕರಿಸಿರುವುದು.

ಶ್ರೀ ಪಿ. ಬಸವರಾಜು (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, 1992ರ ಡಿಸೆಂಬರ್‌ನಲ್ಲಿ ಆಂಧ್ರಪ್ರದೇಶದ ವಿಜಯವಾಡದಲ್ಲಿ ನಡೆದ ಅಖಿಲ ಭಾರತ ರಾಷ್ಟ್ರೀಯ ಕ್ರೀಡಾ ಸ್ಪರ್ಧೆಗೆ ಕರ್ನಾಟಕದಿಂದ ಆಯ್ಕೆಯಾಗಿದ್ದ ಶ್ರೀ ಕಿಶೋರ್ ಎಂಬುವವರಿಗೆ ಅವಕಾಶ ನಿರಾಕರಿಸಿದ ಬಗ್ಗೆ ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಮಂತ್ರಿಗಳು ಗಮನ ಸೆಳೆಯುತ್ತೇನೆ.

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಇಲಾಖಾ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆ ಮಾಡುತ್ತೇನೆ.

ಅಖಿಲ ಭಾರತ ಗ್ರಾಮೀಣ ಕ್ರೀಡಾಕೂಟವನ್ನು ಭಾರತ ಕ್ರೀಡಾ ಪ್ರಾಧಿಕಾರವು ರಾಜ್ಯ ಕ್ರೀಡಾ ಪರಿಷತ್ತುಗಳ ಸಹಕಾರ/ಸಹಭಾಗಿತ್ವದಲ್ಲಿ ಪ್ರತಿ ವರ್ಷವೂ ನಡೆಸಿಕೊಂಡು ಬರುತ್ತಿದೆ. ಈ ಕ್ರೀಡಾಕೂಟದ ಒಂದನೇ ಗುಂಪಿನಲ್ಲಿ ಫುಟ್‌ಬಾಲ್, ಖೋ ಖೋ ಮತ್ತು ಈಜು ಸ್ಪರ್ಧೆಗಳು ಬರುತ್ತವೆ. ಫುಟ್‌ಬಾಲ್ ಮತ್ತು ಖೋ ಖೋ ಕ್ರೀಡೆಗಳಲ್ಲಿ ರಾಜ್ಯ ಮಟ್ಟದ ಪಂದ್ಯಾವಳಿಯನ್ನು ಗುಲ್ಬರ್ಗಾದಲ್ಲಿ ಮತ್ತು ಈಜು ಸ್ಪರ್ಧೆಗಳಲ್ಲಿ ರಾಜ್ಯ ಮಟ್ಟದ ಪಂದ್ಯಾವಳಿಯನ್ನು ಬೆಂಗಳೂರಿನಲ್ಲಿ ನಡೆಸಿ ರಾಷ್ಟ್ರೀಯ ಕ್ರೀಡಕೂಟದಲ್ಲಿ ಭಾಗವಹಿಸಲು ಕ್ರೀಡಾಪಟುಗಳನ್ನು ಆಯ್ಕೆ ಮಾಡಲಾಯಿತು. ಹೀಗೆ ರಾಷ್ಟ್ರೀಯ ಕ್ರೀಡಾಕೂಟಕ್ಕೆ ಆಯ್ಕೆಯಾದ ಬಾಲಕ ಬಾಲಕಿಯರಿಗೆ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ದಿನಾಂಕ 8-12-1992 ರಿಂದ 17-12-1992 ರವರೆಗೆ ತರಬೇತಿ ಶಿಬಿರವನ್ನು

ನಡೆಸಲು ಕರ್ನಾಟಕ ರಾಜ್ಯ ಕ್ರೀಡಾ ಪರಿಷತ್ತು ವ್ಯವಸ್ಥೆ ಮಾಡಿತ್ತು. ಈ ತರಬೇತಿಯ ನಂತರ ಮೇಲೆ ಹೇಳಿದ ಮೂರು ಕ್ರೀಡೆಗಳಲ್ಲಿ ಭಾಗವಹಿಸಲು, ಕರ್ನಾಟಕ ರಾಜ್ಯದ 16ಕ್ಕೂ ಕಡಿಮೆ ವಯಸ್ಸಿನ ಬಾಲಕ ಬಾಲಕಿಯರ ಕ್ರೀಡಾ ತಂಡ ಆಂಧ್ರಪರದೇಶದ ವಿಜಯವಾಡದಲ್ಲಿ 20 ರಿಂದ 23ನೇ ಡಿಸೆಂಬರ್ 1992ರ ವರೆಗೆ ನಡೆಸಲು ಏರ್ಪಡಿಸಲಾಗಿತ್ತು. ಅಖಿಲ ಭಾರತ ಗ್ರಾಮೀಣ ಕ್ರೀಡಾಕೂಟದಲ್ಲಿ ಭಾಗವಹಿಸಲು ಕರ್ನಾಟಕ ರಾಜ್ಯ ತಂಡ ಡಿಸೆಂಬರ್ 17 ರಂದು ಬೆಂಗಳೂರನ್ನು ಬಿಡಬೇಕಿತ್ತು.

ಆದರೆ ಡಿಸೆಂಬರ್ 6 ರಂದು ಆಯೋಧ್ಯೆಯಲ್ಲಾದ ಪ್ರಕರಣದಿಂದಾಗಿ ದೇಶದಾದ್ಯಂತ ಶಿಸ್ತು ಮತ್ತು ಕಾನೂನು ಪರಿಸ್ಥಿತಿ ಪ್ರಕ್ಷುಬ್ಧವಾದ ವಿಚಾರ ಎಲ್ಲರಿಗೂ ತಿಳಿದ ವಿಷಯ. ಅದೇ ಸಂದರ್ಭದಲ್ಲಿ ದಿನಾಂಕ 15-12-92 ರಂದು ಕೇಂದ್ರ ಸರ್ಕಾರವು ಮಧ್ಯಪ್ರದೇಶ, ಹಿಮಾಚಲ ಪ್ರದೇಶ ಮತ್ತು ರಾಜಸ್ಥಾನ ಆಡಳಿತದ ಮೂರು ರಾಜ್ಯಗಳನ್ನು ವಜಾ ಮಾಡಲಾಗಿ, ದೇಶದಾದ್ಯಂತ ಶಿಸ್ತು ಮತ್ತು ಕಾನೂನು ಪರಿಸ್ಥಿತಿ ಇನ್ನೂ ಬಿಗಡಾಯಿಸಬಹುದು ಎಂಬ ಭಯ ಮತ್ತು ಆತಂಕ ಎಲ್ಲೆಡೆಯೂ ಹಬ್ಬಿತ್ತು. ಇಂಥ ಸಂಧಿಗ್ಧ ಪರಿಸ್ಥಿತಿಯಲ್ಲಿ ಎಳೆ ವಯಸ್ಸಿನ ಬಾಲಕ ಬಾಲಕಿಯರನ್ನು ದೂರದ ವಿಜಯವಾಡಕ್ಕೆ ಕಳಿಸಬೇಕೇ ಬೇಡವೇ ಎಂಬ ತೀರ್ಮಾನವನ್ನು ಕರ್ನಾಟಕ ರಾಜ್ಯ ಕ್ರೀಡಾ ಪರಿಷತ್ತು ತೆಗೆದುಕೊಳ್ಳಬೇಕಾಯಿತು. ಡಿಸೆಂಬರ್ 15ನೇ ದಿನಾಂಕದಂದು ಪ್ರಚಲಿತವಿದ್ದ ಒಟ್ಟಾರೆ ಪರಿಸ್ಥಿತಿಯನ್ನು ಕೂಲಂಕುಷವಾಗಿ ಪರಿಗಣಿಸಿ 16ಕ್ಕೂ ಕಡಿಮೆ ವಯಸ್ಸಿನ ಬಾಲಕ ಬಾಲಕಿಯರನ್ನು, ಹದಗೆಟ್ಟಿದ್ದ ಶಿಸ್ತು ಮತ್ತು ಕಾನೂನಿನ ಪರಿಸ್ಥಿತಿಯಲ್ಲಿ, ದೂರದ ವಿಜಯವಾಡಕ್ಕೆ ಕಳುಹಿಸುವುದು ಅವರ ಸುರಕ್ಷತೆಯ ದೃಷ್ಟಿಯಿಂದ ಸರಿಯಲ್ಲವೆಂದು ಕರ್ನಾಟಕ ರಾಜ್ಯ ಕ್ರೀಡಾ ಪರಿಷತ್ತು ತೀರ್ಮಾನಿಸಿ, ತರಬೇತಿ ಶಿಬಿರಕ್ಕೆ ಬಂದಿದ್ದ ಕ್ರೀಡಾಪಟುಗಳನ್ನು ಅವರಿಗೆ ಕೊಡಬೇಕಾದ ಪ್ರಯಾಣ ವೆಚ್ಚ ಇತ್ಯಾದಿಗಳನ್ನು ಕೊಟ್ಟು, ಅವರವರ ಸ್ಥಳಗಳಿಗೆ ವಾಪಾಸ್ಸು ಕಳುಹಿಸಲಾಯಿತು. ಹೀಗೆ ವಾಪಸ್ಸು ಕಳಿಸಲ್ಪಟ್ಟ ಬಾಲಕ ಬಾಲಕಿಯರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಇಬ್ಬರು ಬಾಲಕರು ಮತ್ತು ಇಬ್ಬರು ಬಾಲಕಿಯರು ಇದ್ದರು. ಇವರ ಪೈಕಿ ದಿನಾಂಕ 14-2-1993ರ ತರಂಗ ವಾರಪತ್ರಿಕೆಯಲ್ಲಿ ಕತ್ತು ಹಿಸುಕುವ ಪ್ರಕರಣವೆಂಬ ಹೆಸರಿನಲ್ಲಿ ಪ್ರಕಟವಾಗಿರುವ ಲೇಖನವನ್ನು ಬರೆದಿರುವ ಮಣಿಪಾಲಿನ ಕೆ.ಎಮ್.ಸಿ ಆಸ್ಪತ್ರೆಯಲ್ಲಿ ಪ್ರೊಫೆಸರ್ ಆಗಿರುವ ಡಾ. ಅಂಜಲಿ ರಾವ್ ಅವರ ಮಗಳು ಪಲ್ಲವಿರಾವ್ ಸಹ ಒಬ್ಬಳು. ದಕ್ಷಿಣ ಕನ್ನಡ ಜಿಲ್ಲೆಯ ನಾಲ್ವರು ಬಾಲಕ ಬಾಲಕಿಯರಲ್ಲದೆ, ರಾಜ್ಯದ 11 ಜಿಲ್ಲೆಗಳಿಂದ ಬಂದಿದ್ದ ಕ್ರೀಡಾಪಟುಗಳನ್ನು ಡಿಸೆಂಬರ್ 15 ರಂದು ಅವರವರ ಸ್ಥಳಗಳಿಗೆ ವಾಪಾಸ್ಸು ಕಳಿಸಲಾಗಿದೆ. ಬೇರೆ ಜಿಲ್ಲೆಗಳ ಕ್ರೀಡಾಪಟುಗಳಿಂದಾಗಲೀ ಅವರ ತಂದೆ ತಾಯಿಗಳಿಂದಾಗಲೀ ಇದರ ಬಗ್ಗೆ ಯಾವ ಆಕ್ಷೇಪವೂ ಬಂದಿಲ್ಲ.

ವಿಜಯವಾಡದಲ್ಲಿ ವ್ಯವಸ್ಥೆ ಮಾಡಲಾಗಿದ್ದ ಅಖಿಲ ಭಾರತ ಗ್ರಾಮೀಣ ಕ್ರೀಡಾ ಕೂಟದಲ್ಲಿ ಒಟ್ಟು 32 ರಾಜ್ಯ ತಂಡಗಳು ಭಾಗವಹಿಬೇಕಾಗಿತ್ತು. ವಾಸ್ತವವಾಗಿ 8 ರಾಜ್ಯಗಳು ಮಾತ್ರವೇ ತಮ್ಮ ತಂಡಗಳನ್ನು ವಿಜಯವಾಡಕ್ಕೆ ಕಳುಹಿಸಿದ್ದು, ಈಜು ಸ್ಪರ್ಧೆಯಲ್ಲಿ 3 ರಾಜ್ಯಗಳು ಮಾತ್ರ ಭಾಗವಹಿಸಿದ್ದು, ಅತಿಥೇಯ ರಾಜ್ಯವನ್ನು ಬಿಟ್ಟರೆ ಈಜು ಸ್ಪರ್ಧೆಗಳಲ್ಲಿ ಭಾಗವಹಿಸಿದ ರಾಜ್ಯಗಳು ಎಂದರೆ ತಮಿಳುನಾಡು ಮತ್ತು ಮಹಾರಾಷ್ಟ್ರ ಮಾತ್ರ. ಆದರೆ 32 ರಾಜ್ಯಗಳ ಪೈಕಿ 8 ರಾಜ್ಯಗಳ ಕ್ರೀಡಾ ತಂಡಗಳು ಮಾತ್ರವೇ ಈ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದವು ಎಂದು ತಿಳಿದು ಬಂದಿದೆ. ಅಂದರೆ ಬೇರೆ 24 ರಾಜ್ಯಗಳ ಕ್ರೀಡಾ ಪ್ರಾಧಿಕಾರ:ಪರಿಷತ್ತು:ಕ್ರೀಡಾ ಇಲಾಖೆಗಳು ಕೂಡ ಡಿಸೆಂಬರ್

3ನೇ ವಾರದಲ್ಲಿ ದೇಶದಲ್ಲಿ ಪ್ರಚಲಿತವಿದ್ದ ಪ್ರಕ್ಸುಬ್ಜ ಶಿಸ್ತು ಮತ್ತು ಕಾನೂನು ಪರಿಸ್ಥಿತಿಯಲ್ಲಿ ಎಳೆ ವಯಸ್ಸಿನ ಬಾಲಕ ಬಾಲಕಿಯರನ್ನು ವಿಜಯವಾಡಕ್ಕೆ ಕಳುಹಿಸುವುದು ಅವರ ಸುರಕ್ಷತೆಯ ದೃಷ್ಟಿಯಿಂದ ಸರಿಯಲ್ಲವೆಂದು ಕರ್ನಾಟಕ ರಾಜ್ಯ ಕ್ರೀಡಾ ಪರಿಷತ್ತಿನಂತೆಯೇ ತೀರ್ಮಾನಿಸಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಈ ತೀರ್ಮಾನವನ್ನು ಎಳೆ ವಯಸ್ಸಿನ ಕ್ರೀಡಾಪಟುಗಳು ಸುರಕ್ಷತೆಯ ದೃಷ್ಟಿಯಿಂದ ತೆಗೆದುಕೊಂಡಿದ್ದೇ ಹೊರತು ಅವರ ಪ್ರತಿಭೆಯನ್ನು ಹತ್ತಿಕ್ಕುವ ದೃಷ್ಟಿಯಿಂದ ತೆಗೆದುಕೊಂಡಿಲ್ಲ. ಕರ್ನಾಟಕ ರಾಜ್ಯ ಕ್ರೀಡಾ ಪರಿಷತ್ತಿನ ಅಧ್ಯಕ್ಷರು, ಅಂತರ ರಾಷ್ಟ್ರೀಯ ಖ್ಯಾತವೆತ್ತ ಕ್ರೀಡಾಪಟುವಾದ ಶ್ರೀ ಪ್ರಕಾಶ್ ಪಡುಕೋಣೆ ಅವರ ಸದಿಚ್ಛೆಯನ್ನು (bonafide) ಪ್ರಶ್ನಿಸುವುದು ಸರ್ವದಾ ಸರಿಯಲ್ಲ. ಕ್ರೀಡಾಪಟುಗಳ ಸುರಕ್ಷತೆಯನ್ನು ಕರ್ನಾಟಕ ರಾಜ್ಯ ಕ್ರೀಡಾಪರಿಷತ್ತು ಕ್ಷುಲ್ಲಕವೆಂದು ಎಂದೂ ಪರಿಗಣಿಸಿಲ್ಲ. ವಿಜಯವಾಡದಲ್ಲಿ ಆದ ಅಖಿಲಭಾರತ ಗ್ರಾಮೀಣ ಕ್ರೀಡಾಕೂಟದ ಒಂದನೇ ಗುಂಪು ಪಂದ್ಯಾವಳಿ ಆದ ಮೇಲೆ ಕರ್ನಾಟಕ ರಾಜ್ಯ ಕ್ರೀಡಾ ಪರಿಷತ್ತು ಬೇರೆ ಬೇರೆ ಅಖಿಲ ಭಾರತ ರಾಷ್ಟ್ರೀಯ ಕ್ರೀಡಾಕೂಟಗಳಿಗೆ ಕರ್ನಾಟಕ ರಾಜ್ಯದ ಕ್ರೀಡಾಪಟುಗಳನ್ನು ಕಳುಹಿಸಿರುತ್ತಾರೆ. ಆದ್ದರಿಂದ ಕರ್ನಾಟಕ ರಾಜ್ಯ ಕ್ರೀಡಾ ಪರಿಷತ್ತು ತೆಗೆದುಕೊಂಡ ತೀರ್ಮಾನವನ್ನು ದುರುದ್ದೇಶಪೂರಿತವಾದದ್ದು, ಕ್ರೀಡಾ ಪ್ರತಿಭೆಯನ್ನು ಹತ್ತಿಕ್ಕುವ ದೃಷ್ಟಿಯಿಂದ ತೆಗೆದುಕೊಂಡ ತೀರ್ಮಾನವೆಂದು ಆರೋಪಿಸುವುದು ಅನ್ಯಥಾ ಸರಿಯಲ್ಲ.

ಶ್ರೀ ಪಿ. ಬಸವರಾಜು : ಸನ್ಮಾನ್ಯ ಅಧ್ಯಕ್ಷರೆ, ಗ್ರಾಮೀಣ ಪ್ರದೇಶಗಳಲ್ಲಿರುತಕ್ಕಂಥ ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಅವರಿಗೆ ಪ್ರೋತ್ಸಾಹ ಕೊಡುವ ರೀತಿಯಲ್ಲಿ ನಮ್ಮ ಕ್ರೀಡಾ ಪರಿಷತ್ತು ಕೆಲಸ ಮಾಡಬೇಕಾಗಿದೆ. ಆಧರೆ ಇಲ್ಲಿ ಏನಾಗಿದೆಯೆಂದರೆ, ಡಿಸೆಂಬರ್ 8 ರಿಂದ ಅವರಿಗೆ ತರಬೇತಿ ಶಿಬಿರವನ್ನು ಬೆಂಗಳೂರಿನಲ್ಲಿ ಮಾಡಿ ತರಬೇತಿಯನ್ನು ಕೊಟ್ಟಿದ್ದಾರೆ. ಅವರೇ ತಿಳಿಸಿದಂಥೆ ಡಿಸಂಬರ್ 6 ರಿಂದ ಆಯೋಧ್ಯೆ ಪ್ರಸಂಗದಿಂದ ಗಲಭೆಗಳು ಪ್ರಾರಂಭವಾದವು. ಅದು ಇದ್ದರೂ ಕೂಡಾ ಇಲ್ಲಿ ತರಬೇತಿ ಶಿಬಿರವನ್ನು ನಡೆಸಿದ್ದಾರೆ. ಗ್ರಾಮಾಂತರ ಪ್ರದೇಶಗಳಿಂದ ಕ್ರೀಡಾ ಪಟುಗಳು ಬಂದಿದ್ದಾರೆ, ಅವರು ತಮ್ಮ ಪ್ರತಿಭೆಯನ್ನು ತೋರಿಸಿದ್ದಾರೆ. ಮತ್ತು ಇದರಲ್ಲಿ ತಿಳಿಸಿದಂತೆ ಇದು 16 ವರ್ಷದ ಕೆಳಗಿನವರಿಗೆ ಸಿಗುವಂಥ ಒಂದು ಅನುಭವ, ಆ ವರ್ಷ ದಾಟಿದ ಮೇಲೆ ಪುನಃ ಅವರಿಗೆ ಅವಕಾಶ ಸಿಗುವುದಿಲ್ಲ. ಈ ವರ್ಷ ಅದರಲ್ಲಿ ಭಾಗವಹಿಸುವುದಕ್ಕೆ ಸಾಧ್ಯವಾಗಿದ್ದರೆ ಮಾತ್ರ ತಮ್ಮ ಪ್ರತಿಭೆಯನ್ನು ರಾಷ್ಟ್ರೀಯ ಮಟ್ಟದಲ್ಲಿ ತೋರಿಸಲಿಕ್ಕೆ ಸಾಧ್ಯವಾಗುತ್ತಿತ್ತು. ಆದರೆ ಅಲ್ಲಿ ಮಹಾರಾಷ್ಟ್ರದಿಂದ ಮತ್ತು ತಮಿಳುನಾಡಿನಿಂದ ಕ್ರೀಡಾಪಟುಗಳು ಬಂದು ಭಾಗವಹಿಸಿದ್ದಾರೆ. ಆದರೆ ಕರ್ನಾಟಕದ ಕ್ರೀಡಾಪಟುಗಳಿಗೆ ತಮ್ಮ ಪ್ರತಿಭೆಯನ್ನು ಅಲ್ಲಿ ಪ್ರದರ್ಶನ ಮಾಡಲಿಕ್ಕೆ ಅವಕಾಶ ಮಾಡಿಕೊಡದೇ ಇರುವುದನ್ನು ನೋಡಿದರೆ ಇದರಲ್ಲಿ ಬೇರೆ ಏನೊ ಕಾರಣ ಇರಬಹುದೆಂದು ಸಂಶಯ ನಮಗೆ ಇದೆ. ಈ ಕ್ರೀಡಾ ಮಂಡಳಿಯಲ್ಲಿ ಅಧಿಕಾರಿಗಳಾಗಿರುವ ಈಶ್ವರಪ್ಪನವರು ಬಹಳ ಒಳ್ಳೆಯವರಿದ್ದಾರೆ. ಮತ್ತು ಅಂತರಾಷ್ಟ್ರೀಯ ಖ್ಯಾತಿ ಪೆಡದಿರುವ ಪ್ರಕಾಶ್‌ಪಡುಕೋಣೆಯವರು ಈ ಕ್ರೀಡಾ ಪರಿಷತ್ತಿನ ಅಧ್ಯಕ್ಷರಾಗಿದ್ದಾರೆ. ಅವರಾದರೂ ಇದರ ಬಗ್ಗೆ ಯೋಚನೆ ಮಾಡಿ ಈ ರೀತಿ ಕುಂಟು ನೆಪವನ್ನು ಹೇಳದೆ ನಮ್ಮ ಕ್ರೀಡಾಪಟುಗಳನ್ನು ಅಲ್ಲಿಗೆ ಕಳುಹಿಸಿದ್ದಿದ್ದರೆ ಅವರು ತಮ್ಮ ಪ್ರತಿಭೆಯನ್‌ನ ತೋರಿಸಲು ಅವಕಾಶವಾಗುತ್ತಿತ್ತು ಎನ್ನುವ ಅನಿಸಿಕೆ ನಮ್ಮ ಮನಸ್ಸಿನಲ್ಲಿ ಬಂದಿದೆ. ಅದೇ ರೀತಿಯಲ್ಲಿ ಈ ಒಂದು ಸೌಲಭ್ಯದಿಂದ ಏನು ವಂಚಿತರಾಗಿದ್ದಾರೆ. ಆ ಕ್ರೀಡಾಪಟುಗಳಿಗೆ ಪುನಃ ಯಾವ ರೀತಿ ಅವಕಾಶ ಮಾಡಿಕೊಡುತ್ತೀರೆಂದು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ.

ಶ್ರೀ ಜಿ.ಎಸ್. ಆಚಾರ್ : ಸನ್ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಅಂತರ ರಾಷ್ಟ್ರೀಯ ಖ್ಯಾತಿ

ಪಡೆದು ಕ್ರೀಡಾ ಪರಿಷತ್ತಿನ ಅಧ್ಯಕ್ಷರಾಗಿರುವ ಅಥವಾ ಆ ಪರಿಷತ್ತಿನ ಕಾರ್ಯದರ್ಶಿಗಳಾಗಿರುವವರ ಭೋನಾಫೈಡನ್ನು ಪ್ರಶ್ನಿಸುವ ಉದ್ದೇಶ ನಮ್ಮದಲ್ಲ. ಆದರೆ ಕ್ರೀಡಾ ಪಟುಗಳು ಸ್ಪರ್ಧೆಯಲ್ಲಿ ಭಾಗವಹಿಸಲಿಕ್ಕೆ ಸಾಧ್ಯವಾಗದೆ ವಂಚಿತರಾಗಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯವರು 4 ಜನ ಉಳಿದವರು 11 ಜನ ಒಟ್ಟು 15 ಜನ ಕ್ರೀಡಾ ಪಟುಗಳ ಕ್ರೀಡೆಯಲ್ಲಿ ಭಾಗವಹಿಸುವ ಅವಕಾಶದಿಂದ ವಂಚಿತರಾಗಿದ್ದಾರೆ ಎನ್ನುವುದೆ ನಮ್ಮ ಮುಂದಿರುವ ಸಮಸ್ಯೆ. ಅಯೋಧ್ಯೆ ಗಲಾಟೆಯಾದಾಗ ರಾಜ್ಯ ಮಟ್ಟದ ಆಯ್ಕೆ ನಡೆಯಿತು. ರಾಷ್ಟ್ರ ಮಟ್ಟದ ತರಬೇತಿಗಾಗಿ ಅವರನ್ನು ಬೆಂಗಳೂರಿಗೆ ಕರೆಸಿಕೊಳ್ಳಲಾಯಿತು. 15ನೇ ತಾರೀಖು ಹಿಮಾಚಲ ಪ್ರದೇಶ ಮತ್ತು ರಾಜಸ್ಥಾನ ಹಾಗೂ ಉತ್ತರ ಪ್ರದೇಶಗಳ ಸರ್ಕಾರಗಳನ್ನು ಕೇಂದ್ರ ಸರ್ಕಾರದವರು ವಜಾ ಮಾಡಿದರು ಎಂದು ಹೇಳಿ ತರಬೇತಿಗೆಂದು ಬಂದಿದ್ದ ಕ್ರೀಡಾಪಟುಗಳನ್ನು ತಕ್ಷಣ ಅವರ ರಾಜ್ಯಗಳಿಗೆ ವಾಪಸ್ ಕಳುಹಿಸಿಕೊಡಲಾಯಿತು. ನಮ್ಮ ಕರ್ನಾಟಕ ರಾಜ್ಯದ ಕ್ರೀಡಾಪಟುಗಳನ್ನು ಸ್ಪರ್ಧೆಗೆ ಕಳುಹಿಸಿಕೊಡಲಿಲ್ಲ. ಮುಂದಿನ ವರ್ಷ ನಮಗೆ 16 ವರ್ಷ ದಾಟುವುದರಿಂದ ಪುನಃ ನಾವು ಈ ಸ್ಪರ್ಧೆಗೆ ನಮ್ಮ ಜೀವಮಾನದಲ್ಲಿ ಬರುವುದಕ್ಕಾಗುವುದಿಲ್ಲ, ಆದಕಾರಣ ನಾವು ನಮ್ಮ ಸ್ವಂತ ಖರ್ಚಿನಲ್ಲಿ ಭಾಗವಹಿಸತ್ತೇವೆಂದು ಕೆಲವು ಕ್ರೀಡಾಪಟುಗಳು ವಿನಂತಿಸಿಕೊಂಡರೂ ಅವರನ್ನು ಕಳುಹಿಸಿಕೊಡಲಿಲ್ಲ. ಇದು ಯಾರು ಮಾಡಿದ ತಪ್ಪು ಎಂದು ನಾನು ಹೇಳುವುದಿಲ್ಲ. ಈ ದುರದೃಷ್ಟಕರವಾದ ಘಟನೆ ಆಗಬಾರದಿತ್ತು. ನಮ್ಮ ಕ್ರೀಡಾ ಪರಿಷತ್ತಿನಲ್ಲಿ ಬಹಳ ಒಳ್ಳೆಯವರು ಅಧ್ಯಕ್ಷರಾಗಿದ್ದಾರೆ ಮತ್ತು ಒಳ್ಳೆಯ ಅಧಿಕಾರಿಗಳು ಅದರ ಕಾರ್ಯದರ್ಶಿಗಳಾಗಿದ್ದಾರೆ. ಇದರ ಜೊತೆಗೆ ನಮ್ಮ ಮುಖ್ಯ ಮಂತ್ರಿಯವರೂ ಸಹ ಕ್ರೀಡೆ ಸಾಹಿತ್ಯ, ಕಲೆಯ ಅಭಿಮಾನಿಗಳು. ಸಂಬಂಧಪಟ್ಟ ಮಂತ್ರಿಯವರು ಆಗ ಇದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಎಲ್ಲ ಇದ್ದರೂ ಸಹ ಈ ರೀತಿಯಾಗಿರುವುದು ದುರದೃಷ್ಟಕರವೆಂದು ನಾನು ಹೇಳಬಯಸುತ್ತೇನೆ. ಅಯೋಧ್ಯೆ ಪ್ರಕರಣದಿಂದ ಇಡೀ ದೇಶಧಲ್ಲಿ ಏನು ಅಪ್ರಹನ್‌ಷನ್ ಬಂತು ಎಂದರೆ ಇಡೀ ರಾಷ್ಟ್ರದಲ್ಲಿ ತೊಂದರೆಯಾಗುತ್ತದೆ, ಮಕ್ಕಳಿಗೆ ತೊಂದರೆಯಾಗುತ್ತದೆ, ಅವರ ಜೀವ ಮುಖ್ಯ ಎಂದು ತೀರ್ಮಾನ ತೆಗೆದುಕೊಂಡರು. ಇಡೀ ರಾಷ್ಟ್ರದಲ್ಲಿ 32 ರಾಜ್ಯಗಳಿಂದ ಕ್ರೀಡಾಪಟುಗಳು ಭಾಗವಹಿಸಬೇಕಾಗಿತ್ತು. 24 ರಾಜ್ಯಗಳವರು ಇದರಲ್ಲಿ ಭಾಗವಹಿಸಲಿಲ್ಲ. 8 ರಾಜ್ಯಗಳ ಕ್ರೀಡಾ ಪಟುಗಳು ಮಾತ್ರ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಗಲಭೆಗಳು ಆಗುವ ಸಂಭವವಿರುವುದರಿಂದ ಈ ಕ್ರೀಡಾ ಕೂಟವನ್ನು ಪೋಸ್ಟ್‌ಪೋನ್ ಮಾಡಬೇಕೆಂದು ರಾಷ್ಟ್ರೀಯ ಕ್ರೀಡಾ ಕೂಟಕ್ಕೆ ಏಕೆ ಕೇಳಲಿಲ್ಲ? ಇಡೀ ದೇಶದಿಂದ ಚಿಕ್ಕ ಮಕ್ಕಳು ಅಲ್ಲಿಗೆ ಬರುವುದರಿಂದ ತೊಂದರೆಯಾಗಬಹುದು ಆದ ಕಾರಣ ಕ್ರೀಡಾ ಸ್ಪರ್ಧೆಯನ್ನು ಮುಂದಕ್ಕೆ ಹಾಕಬೇಕೆಂದು ಕೇಳಬೇಕಾಗಿತ್ತು. ನಾವು ಕೊಟ್ಟ ಗಮನ ಸೆಳೆಯುವ ಸೂಚನೆಯಲ್ಲಿ ಕಿಶೋರ ಪ್ರತಿಭೆ ಎಂದು ಬರೆದು ಕಳುಹಿಸಿದ್ದೆವು. ಆದರೆ ಇಲ್ಲಿ ಶ್ರೀ ಕಿಶೋರ ಎಂಬುವನಿಗೆ ಎಂದು ಬಂದಿದೆ. ಹೀಗೆ ಆಗಬಾರದಾಗಿತ್ತು. ಇದು ಏಕೆ ಹೀಗಾಯಿತೋ ನನಗೆ ಗೊತ್ತಿಲ್ಲ. ಅಲ್ಲಿ ಕಿಶೋರ ಎಂಬುವರಿಲ್ಲ. ಈ ರೀತಿ ಮಕ್ಕಳಿಗೆ ತೊಂದರೆಯಾಗುವಂಥ ಪರಿಸ್ಥಿತಿ ಆದೀತು ಎಂದು ನಿಮಗೆ ಗೊತ್ತಿದ್ದರೆ ಇದನ್ನು ರಾಷ್ಟ್ರದ ಸರ್ಕಾರಕ್ಕೆ ನಮ್ಮ ರಾಜ್ಯ ಸರ್ಕಾರ ತಿಳಿಸಬೇಕಾಗಿತ್ತು. ಅದನ್ನು ಪೋಸ್ಟ್‌ಪೋನ್ ಮಾಡಸಬೇಕಾಗಿತ್ತು. ಇವತ್ತು ಅದು ಕೇವಲ 8 ರಾಜ್ಯಗಳು ಕ್ರೀಡಾ ಕೂಟ ಆಯಿತು. ತಮಿಳುನಾಡಿನವರು ಹೋಗಿದ್ದಾರೆ, ಆಂಧ್ರ ಪ್ರದೇಶದವರು ಹೋಗಿದ್ದಾರೆ, ಮಹಾರಾಷ್ಟ್ರದವರೂ ಹೋಗಿದ್ದಾರೆ. ಆದರೆ ಕರ್ನಾಟಕದವರು ಈ ಅವಕಾಶದಿಂದ ವಂಚಿತರಾಗಿದ್ದಾರೆ. ಇದರಲ್ಲಿರುವ ಬೇರೆ ಎಲ್ಲಾ ವಿಚಾರಗಳಲ್ಲಿ ಖಾಸಗಿಯಾದ ವಿಚಾರ ಇದೆ. ಅದನ್ನು ನಾನೂ ಒಪ್ಪುವುದಿಲ್ಲ. ಖಾಸಗಿಯಾಗಿ, ವೈಯಕ್ತಿಕವಾಗಿ, ಕ್ರೀಡಾ ಕೂಟದ ಅಧ್ಯಕ್ಷರೂ ಅಥವಾ ಕಾರ್ಯದರ್ಶಿಗಳೊ

ಮಾಡಿದ ಆರೋಪವನ್ನು ನಾನು ಒಪ್ಪುವುದಿಲ್ಲ. ಇಲ್ಲಿ ಮೂಲಭೂತವಾಗಿ ನಾನು ಹೇಳುವುದೇನೆಂದರೆ, ನಿಜವಾಗಿ ಕರ್ನಾಟಕ ರಾಜ್ಯಕ್ಕೆ ಹೆಮ್ಮೆ ತರತಕ್ಕಂಥ ಕ್ರೀಡಾಪಟುಗಳಿಗೆ ಸ್ಪರ್ಧೆಯಲ್ಲಿ ಭಾಗವಹಿಸುವ ಅವಕಾಶ ತಪ್ಪಿಹೋಯಿತು. ತಮಿಳುನಾಡು, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದ ಕ್ರೀಡಾಪಟುಗಳು ಅಧರಲ್ಲಿ ಭಾಗವಹಿಸಿ ಎಲ್ಲಾ ಬಹುಮಾನಗಳನ್ನು ಅವರೇ ಹೊಡೆದುಕೊಂಡು ಹೋದರು. ಕರ್ನಾಟಕದವರಿಗೆ ತಪ್ಪಿಹೋಯಿತು ಎನ್ನುವಂಥಾದ್ದೇ ನಮಗಾದ ವೇದನೆ. ಕರ್ನಾಟಕದ ಕ್ರೀಡಾಪಟುಗಳು ಹೋಗಿದ್ದರೆ ಬಹುಮಾನಗಳು ನಮಗೂ ಬರುತ್ತಿತ್ತು. ನಿಮಗೆ ನಮ್ಮ ಕರ್ನಾಟಕದ ಕ್ರೀಡಾ ಮಕ್ಕಳ ಹಿತ ರಕ್ಷಣೆ ಮಾಡುವುದರ ಜೊತೆಗೆ ಅವರು ಕ್ರೀಡೆಯಲ್ಲಿ ಭಾಗವಹಿಸುವಂತೆಯೂ ಮಾಡಬೇಕಾಗಿತ್ತು. ಇನ್ನು ಮುಂದಾದರೂ ಹೀಗೆ ಆಗದಿರಲೆಂದು ನಾನು ಹಾರೈಸುತ್ತೇನೆ.

ಶ್ರೀಮತಿ ಮೋಟಮ್ಮ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ರಿಪ್ಲೈನಲ್ಲಿ ಕೆಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಕೊನೆಯದಾಗಿ ಒಂದು ಮಾತನ್ನು ಹೇಳುತ್ತಾರೆ. ಬೇರೆ ಜಿಲ್ಲೆಗಳ ಕ್ರೀಡಾಪಟುಗಳಿಂದಾಗಲಿ ಅಥವಾ ಅವರ ತಂದೆತಾಯಿಗಳಿಂದಾಗಲಿ ಇದರ ಬಗ್ಗೆ ಯಾವ ಆಕ್ಷೇಪವೂ ಬಂದಿಲ್ಲ, ಆದರೆ ಪಲ್ಲವಿ ರಾವ್ ಅವರ ತಾಯಿ ಮಾತ್ರ ಇದರ ಬಗ್ಗೆ ಆಕ್ಷೇಪ ಮಾಡಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಏಕೆಂದರೆ ಎಲ್ಲಾ ಕ್ರೀಡಾಪಟುಗಳ ತಂದೆ ತಾಯಿಗಳೂ ಕ್ರೀಡಾಪಟುಗಳು ಆಗಿರುವುದಿಲ್ಲ ಅಥವಾ ಅದರ ಬಗ್ಗೆ ಆಸಕ್ತಿ ಇರುವುದಿಲ್ಲ. ಉದಾಹರಣೆಗೆ ಹೇಳಬೇಕಾದರೆ ನಾನು ಸ್ಟೇಟ್ ಲೆವಲ್ ಯೂನಿವರ್ಸಿಟಿ ಪ್ಲೇಯರ್ ಆಗಿದ್ದೆ. ಆದರೆ ನಮ್ಮ ಅಪ್ಪ, ಅಮ್ಮ ಗ್ರಾಮಾಂತರ ಪ್ರದೇಶದವರು. ಅವರು ಅನ್ ಎಜುಕೇಟೆಡ್. ಅವರಿಗೆ ಕ್ರೀಡೆ ಬಗ್ಗೆ ಏನೂ ಗೊತ್ತಿರಲಿಲ್ಲ. ಆದರೆ ಈ ಕ್ರೀಡೆ ಬಗ್ಗೆ ಆಸಕ್ತಿ ಇರುವಂಥ ಒಬ್ಬ ತಾಯಿ ಪ್ರಶ್ನೆ ಮಾಡಿರುವುದನ್ನು ಇವರು ಸರಿಯಲ್ಲ ಎನ್ನುವ ರೀತಿ ಹೇಳಿಕೆಯಲ್ಲಿ ಹೇಳಿರುವುದನ್ನು ನಾನು ಒಪ್ಪುವುದಿಲ್ಲ. ಯಾರು ಆಗ ಆಕ್ಷೇಪ ಮಾಡಿದ್ದಾರೋ ಅವರನ್ನು ನಿಜವಾಗಿ ಅಪ್ರಿಷಿಯೇಟ್ ಮಾಡಬೇಕು. ಒಬ್ಬ ಕ್ರೀಡಾಪಟುವಿನ ತಾಯಿ ಎಷ್ಟು ಇಂಟರೆಸ್ಟ್ ಇಟ್ಟುಕೊಂಡು ತನ್ನ ಮಗುವಿನ ಕ್ರೀಡಾ ಪ್ರತಿಭೆಗೆ ಅನ್ಯಾಯವಾಗಿದೆ ಎನ್ನುವುದನ್ನು ಪ್ರಸ್ತಾಪ ಮಾಡಿರುವುದರ ಬಗ್ಗೆ ಇವರು ಅಪ್ರಿಷಿಯೇಟ್ ಮಾಡಬೇಕು. ಇನ್ನು ಎರಡನೆಯದಾಗಿ, ಬೇರೆ ರಾಜ್ಯಗಳವರು ಅಲ್ಲಿಗೆ ಬಂದಿದ್ದರೋ ಬಿಟ್ಟಿದ್ದರೋ ಅದು ಬೇರೆ ವಿಚಾರ. ಆದರೆ ನಮ್ಮ ರಾಜ್ಯದವರು ಅಲ್ಲಿ ಏಕೆ ಪ್ರತಿನಿಧಿಸಲಿಲ್ಲ? ಏಕೆಂದರೆ ಈ ಕ್ರೀಡೆಯಲ್ಲಿ ಭಾಗವಹಿಸುವುದು ನಮ್ಮ ರಾಜ್ಯಕ್ಕೆ ಕೀರ್ತಿ ತರತಕ್ಕಂಥ ವಿಷಯ. ಯಾವುದೇ ಕ್ರೀಡೆಯಲ್ಲಿ ನಮ್ಮ ರಾಜ್ಯದವರು ಭಾಗವಹಿಸಿ ವಿನ್ ಆದರೆ ಅದು ನಮ್ಮ ರಾಜ್ಯಕ್ಕೆ ಕೀರ್ತಿ ಬರುತ್ತದೆ, ಗೌರವ ಬರುತ್ತದೆ. ಅದು ಬಹಳ ಮುಖ್ಯ. ಅದನ್ನು ಇಲಾಖೆಯವರು ಏಕೆ ಯೋಚನೆ ಮಾಡಲಿಲ್ಲ? ಆಂಧ್ರ, ಕರ್ನಾಟಕಕ್ಕೆ ಎಷ್ಟು ದೂರವಿತ್ತು? ಅಂತಹ ಗಲಭೆ ಏನಾಗಿತ್ತು? ತಮಿಳುನಾಡಿನವರು ಹೋಗಿದ್ದಾರೆ, ಮಹಾರಾಷ್ಟ್ರದವರು ಹೋಗಿದ್ದಾರೆ. ದಕ್ಷಿಣ ಭಾರತದಲ್ಲಿ ನಾವು ಇದ್ದುಕೊಂಡು ನಾವು ಏಕೆ ಹೋಗಲಿಲ್ಲ ಎನ್ನುವುದು ಬಹಳ ಮುಖ್ಯ. ಇವರು ಮನಸ್ಸು ಮಾಡಿದ್ದರೆ ಕ್ರೀಡಾಪಟುಗಳನ್ನು ಕಳುಹಿಸಬಹುದಾಗಿತ್ತು.

ಇದರಲ್ಲಿ ನಮಗೇನು ಅನ್ನಿಸುತ್ತದೆ ಎಂದರೆ ಅಲ್ಲಿ ಕೆಲಸ ಮಾಡುವ ಅಧ್ಯಕ್ಷರಿಗಾಗಲಿ ಅಥವಾ ಯೂಥ್ ಸರ್ವಿಸ್ ಇಲಾಖೆಯ ಸೆಕ್ರೆಟರಿ ಅಥವಾ ಉಳಿದ ನಿರ್ದೇಶಕರಿಗಾಗಲೀ ಕ್ರೀಡೆ ಬಗ್ಗೆ ಆಸಕ್ತಿ ಇರಬೇಕು. ಯಾವುದೇ ಹುದ್ದೆ ವಹಿಸಿಕೊಂಡಾಗ ಅದರ ಬಗ್ಗೆ ನಮಗೆ ಆಸಕ್ತಿ ಮತ್ತು ಇನ್‌ವಾಲ್ವ್‌ಮೆಂಟಿಲ್ಲದಿದ್ದರೆ ನಾವು ಏನೂ ಸಾಧನೆ ಮಾಡುವುದಕ್ಕೆ ಸಾಧ್ಯಯವಿಲ್ಲ. ಅದು ಈ

ಇಲಾಖೆಯವರಲ್ಲಿ ಇದೆಯೇ ಎನ್ನುವುದನ್ನು ಮೊದಲು ನಾವು ವಿಚಾರ ಮಾಡಬೇಕಾಗುತ್ತದೆ. ಆಮೇಲೆ, ನಮ್ಮಲ್ಲಿ ಏನಾಗುತ್ತದೆ ಎಂದರೆ, ಯಾವುದೇ ಕ್ರೀಡಾಚಟುವಟಿಕೆಯಲ್ಲಿ ರಾಜಕೀಯ ಬೆಳೆಸುವುದು ಮತ್ತು ನಮಗೆ ಇಂಟರೆಸ್ಟ್ ಇದ್ದರೆ ಮಾತ್ರ ಈ ಕ್ರೀಡೆಗೆ ಪ್ರೋತ್ಸಾಹ ಕೊಡುವುದು ನಡೆಯುತ್ತದೆ. ಇದು ಈ ಕ್ರೀಡಾ ಇಲಾಖೆ ಮತ್ತು ಕ್ರೀಡಾ ಪರಿಷತ್ತಿನಲ್ಲೂ ನಡೆಯಬಾರದು. ಉದಾಹರಣೆಗೆ ಹೇಳಬೇಕೆಂದರೆ ಶಾಸಕರು ನಾವೆಷ್ಟೋ ಜನರಿದ್ದೇವೆ, ನಮಗೆಲ್ಲರಿಗೂ ಮಿನಿಸ್ಟರಾಗುಕೆಪ್ಯಾಸಿಟಿ, ಯೋಗ್ಯತೆ ಇದೆಯೆಂದು ನಾನಂತೂ ಒಪ್ಪಿಕೊಳ್ಳುವುದಿಲ್ಲ. ಆದರೂ ನಾವೆಲ್ಲ ಆಗಬೇಕೆಂದು ಪ್ರಯತ್ನ ನಡೆಸುತ್ತೇವೆ. ಸಿಗದೇ ಇದ್ದಾಗ ಮಿನಿಸ್ಟ್ರಿ ಎಕ್ಸ್‌ಪ್ಯಾನ್‌ಶನ್ ಆದಾಗ ಎಷ್ಟೋ ಜನ ಇಳಿ ಮೋರೆ ಹಾಕಿಕೊಂಡು ಬೇಸರ ಮಾಡಿಕೊಂಡು ಕೂರುವುದನ್ನು ನಾವು ಕಂಡಿದ್ದೇವೆ. ಹಾಗೆಯೇ ಆ ಎಳೆ ವಯಸ್ಸಿನ ಮಕ್ಕಳಿಗೆ ಏಕೆ ಹಾಗಬಾರದು? ಅವರ ಪ್ರತಿಭೆಯನ್ನು ನಾವು ಚಿವುಟಿಹಾಕಿದ ಹಾಗೆ ಆಗಲಿಲ್ಲವೇ? ಇನ್ಯಾವತ್ತೂ ನಮ್ಮ ರಾಜ್ಯದಲ್ಲಿ ಈ ಇಲಾಖೆಯಲ್ಲಿ ಕ್ರೀಡಾ ಪರಿಷತ್ತಿನಲ್ಲಿ ಆಗಬಾರದೆಂಬುದು ನನ್ನ ಒತ್ತಾಯ.

ಶ್ರೀ ಹೆಚ್. ವಿಶ್ವನಾಥ್ : ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಸದಸ್ಯರು ಕ್ರೀಡಾಪಟುಗಳ ಬಗ್ಗೆ ತೋರಿದಂಥ ಕಳಕಳಿಗೆ ನನ್ನ ಸಹಮತವನ್ನು ಕೂಡ ಈ ಸಂದರ್ಭದಲ್ಲಿ ವ್ಯಕ್ತ ಮಾಡುತ್ತಾ, ಅವರೇ ಕೆಲವು ಉತ್ತರ ಕೊಟ್ಟಿದ್ದಾರೆ. ದುರದೃಷ್ಟಕರ ಅಯೋಧ್ಯೆ ಘಟನೆ ಎಂದು ಮಾನ್ಯ ಆಚಾರ್‌ರವರು ಹೇಳಿದರು. ಆ ದುರದೃಷ್ಟಕರ ಆ ಘಟನೆಯೇ ಈ ಮಕ್ಕಳು ಅವತ್ತು ಅಲ್ಲಿಗೆ ಹೋಗದೇ ಇರುವುದಕ್ಕೆ ಕಾರಣ. ಇದರಲ್ಲಿ ಯಾವ ನೆಪವೂ ಇಲ್ಲ. ಮತ್ತೆ ಅವರ ಕಿಶೋರ ಪ್ರತಿಭೆಯನ್ನು ಹತ್ತಿಕ್ಕುವ, ದಮನ ಮಾಡುವ ಪ್ರಯತ್ನವೂ ಕೂಡ ಕ್ರೀಡಾಪರಿಷತ್ತಿನಿಂದಾಗಿಲ್ಲ. ಅವರಿಗೆ ಅವಕಾಶವನ್ನು ಕೊಡುವ ದೃಷ್ಟಿಯಿಂದಲೇ ಅಖಿಲಭಾರತ ಗ್ರಾಮೀಣ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಲು ತರಬೇತಿ ಶಿಬಿರಕ್ಕೆ ನಾವು ಗುಲ್ಬರ್ಗ ಮತ್ತು ಬೆಂಗಳೂರಿನಲ್ಲಿ ಆಯ್ಕೆ ಶಿಬಿರ ನಡಿಸಿದ್ದೇವೆ. ಶಿಬಿರಕ್ಕೂ ಕೂಡ ಅವರು ಬಂದು ತಯಾರಿ ತೆಗೆದುಕೊಂಡಿದ್ದಾರೆ. ಆದರೆ ಅವರನ್ನು ನಾವು ವಿಜಯವಾಡಕ್ಕೆ ಕಳುಹಿಸತಕ್ಕಂಥ ಸಂದರ್ಭದಲ್ಲಿ ಈ ಅಯೋಧ್ಯೆ ಘಟನೆಯಾಗಿ ಕಾನೂನು ಪರಿಸ್ಥಿತಿ ಕೈಮೀರಿ ಹೋಗಿದ್ದರಿಂದ ಎಳೆಯ ಮಕ್ಕಳು ಅಲ್ಲಿಗೆ ಹೋದರೆ ಏನಾಗುತ್ತದೋ ಎಂಬ ಭಯದಿಂದ ಈ ತೀರ್ಮಾನವನ್ನು ಕ್ರೀಡಾಪರಿಷತ್ ತೆಗೆದುಕೊಂಡಿದೆಯೇ ಹೊರತು ಅದರಲ್ಲಿ ಯಾವ ದುರುದ್ದೇಶವಾಗಲಿ ಅಥವಾ ಯಾರನ್ನೂ ಕೂಡ ಅವಕಾಶದಿಂದ ತಪ್ಪಿಸುವುದಾಗಲಿ ಇಲ್ಲ ಎಂಬುದರ ಜೊತೆಗೆ ನಮ್ಮ ಆಚಾರ್ ಅವರು ಹೇಳಿದ ಹಾಗೆ ತರಂಗದಲ್ಲಿ ಬಂದಿರುವ ವಿಚಾರಗಳು ಕೆಲವು ವೈಯಕ್ತಿಕ ಇವೆ. ಅದು ಅವರವರು ತೀರ್ಮಾನ ಮಾಡಿಕೊಳ್ಳುವ ವಿಚಾರ. ನಮ್ಮ ಇಲಾಖೆಯಾಗಲೀ ಅಥವಾ ಕ್ರೀಡಾ ಪರಿಷತ್ತೇ ಆಗಲಿ ಅದರಲ್ಲಿ ಕಿಶೋರ ಪ್ರತಿಭೆಯನ್ನು ಹತ್ತಿಕ್ಕುವ ಯಾವ ಪ್ರಯತ್ನವನ್ನೂ ನಾವು ಮಾಡಿಲ್ಲ ಎಂದು ಸ್ಪಷ್ಟನೆ ಮಾಡುತ್ತಿದ್ದೇನೇ.

ಶ್ರೀ ಜಿ.ಎಸ್. ಆಚಾರ್ : ಮಾನ್ಯ ಅಧ್ಯಕ್ಷರೆ, ನನಗೆ ಒಂದೇ ಕ್ಲಾರಿಫಿಕೇಷನ್ ಬೇಕು. ಅವರು ತಮ್ಮ ರಿಸ್ಕಿನಿಂದ, ತಮ್ಮ ಖರ್ಚಿನಿಂದ ಹೋಗುತ್ತೇವೆಂದು ಹೇಳಿದವರಿಗೆ ಏಕೆ ಕಳುಹಿಸಿಕೊಡಲಿಲ್ಲ. ಎರಡನೆಯದು, ಇಡೀ ರಾಷ್ಟ್ರದಲ್ಲಿ ಗಲಭೆ ಇದೆ, ಯಾವ ರಾಜ್ಯಗಳವರೂ ಕಳುಹಿಸಿಕೊಡುವುದಿಲ್ಲ. ಅದನ್ನು ಪೋಸ್ಟ್‌ಪೋನ್ ಮಾಡಿ ಎಂದು ನಮ್ಮ ಸರ್ಕಾರ ಏಕೆ ಒತ್ತಾಯ ಹೇಳಲಿಲ್ಲ?

ಶ್ರೀ ವಿಶ್ವನಾಥ್ : ಒಟ್ಟು 32 ರಾಜ್ಯಗಳಲ್ಲಿ ಭಾಗವಹಿಸಿದ್ದು ಬರೀ 8 ರಾಜ್ಯಗಳವರು ಮಾತ್ರ. 24 ರಾಜ್ಯಗಳು ಕೇಂದ್ರಾಡಳಿತವೂ ಸೇರಿ ಅಲ್ಲಿ ಭಾಗವಹಿಸಲಿಲ್ಲ. ಇದರಿಂದ ಕಾನೂನು ಪರಿಸ್ಥಿತಿ

ಕೈಮಿಾರಿದ್ದು ಗೋಚರಿಸುತ್ತದೆ. ಮುಂದೆ ಇಂಥದನ್ನು ನಾವು ಸರಿಮಾಡಿಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತಾ ಮಾನ್ಯ ಆಚಾರ್ ಅವರ ಕಳಕಳಿಯನ್ನು ನಾವು ಬಹಳ ಗಂಭೀರವಾಗಿ ಪರಿಗಣಿಸುತ್ತೇವೆ.

ಅಧ್ಯಕ್ಷರು : ಸಭೇಯ ಕಲಾಪವನ್ನು 2-30ರವರೆಗೆ ಮುಂದೂಡಲಾಗಿದೆ.

(ಸದನವು ಪುನಃ 2-50 ನಿಮಿಷಕ್ಕೆ ಪ್ರಾರಂಭವಾಯಿತು)

ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು)

ನಿಯಮ 334ರ ಮೇರೆಗೆ

1. ಗುಲ್ಬರ್ಗಾದಲ್ಲಿ ಪ್ರಸಿದ್ಧ ಹಜರತ್‌ಖಾಜಾ ನವಾಬ್ ದರ್ಗಾಕ್ಕೆ ಯಾತ್ರೆ ನಿವಾಸ್ ಕಟ್ಟಿಸುವುದು

ಶ್ರೀ ಎಂ.ಎಂ. ಹಿಂಡಸಗೇರಿ : (ಹುಬ್ಬಳ್ಳಿ) ಮಾನ್ಯ ಅಧ್ಯಕ್ಷರೇ, ಉತ್ತರ ಭಾರತದಲ್ಲಿ ಹಾಗೂ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಪ್ರತಿಷ್ಠಿತ ಸ್ಥಳವಾದ ಗುಲ್ಬರ್ಗಾದಲ್ಲಿ ಪ್ರಸಿದ್ಧ ಹಜರತ್ ಖಾಜಾ ಬಂದಾ ನವಾಬ್ ದರ್ಗಾಕ್ಕೆ ಸಾವಿರಾರು ಜನರು ಭಕ್ತಾದಿಗಳು ಜಿಯಾರತ್‌ಗಾಗಿ ಬರುತ್ತಿದ್ದಾರೆ. ಸದರಿ ಸಮಯದಲ್ಲಿ ಭಕ್ತಾದಿಗಳಿಗೆ ಆ ಸ್ಥಳದಲ್ಲಿ ವಸತಿ ಹಾಗೂ ಇನ್ನಿತರ ತೊಂದರೆ ಇರುವುದು ನನ್ನ ಗಮನಕ್ಕೆ ಬಂದಿರುತ್ತದೆ. ಆದುದರಿಂದ ಪ್ರವಾಸೋದ್ಯಮ ಸಂಸ್ಥೆಯ ವತಿಯಿಂದ ನಿವಾಸ್ ಯಾತ್ರೆಯನ್ನು ಕಟ್ಟಿಸಿ ಆ ಜನರಿಗ ತೊಂದರೆಯಾಗುವುದನ್ನು ತಪ್ಪಿಸಲು ಸರ್ಕಾರದ ಗಮನದಲ್ಲಿದೆಯೇ? ಅಂತಹ ಯೋಜನೆ ಏನಾದರೂ ಇದ್ದರೆ ಅದಕ್ಕೆ ಎಷ್ಟು ಹಣ ಖರ್ಚು ಮಾಡುವ ವಿಚಾರ ಸರ್ಕಾರದ ಮುಂದೆ ಇದೆಯೇ? ಇದ್ದರೆ ಸದರಿ ಯೋಜನೆಯನ್ನು ಆದಷ್ಟು ತೀವ್ರವಾಗಿ ಕೈಗೆತ್ತಿಕೊಳ್ಳಬೇಕೆಂದು ಮಾನ್ಯ ಪ್ರವಾಸೋದ್ಯಮ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಇಲಾಖೆಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾದಲ್ಲಿರುವ ಹಜರತ್ ಖಾಜಾ ಬಂದಾ ನವಾಜ್ ದರ್ಗಾಕ್ಕೆ ಮುಸ್ಲಿಮ್ ಭಕ್ತಾದಿಗಳಲ್ಲದೆ ಹಿಂದೂಗಳೂ ಸಹ ಭೇಟಿ ನೀಡಿ ತಮ್ಮ ಗೌರವವನ್ನು ಸಲ್ಲಿಸುತ್ತಾರೆ ಇಲ್ಲಿ ನಡೆಯುವ ಉರುಸಾಗೆ ಲಕ್ಷಾಂತರ ಭಕ್ತಾದಿಗಳು ಆಗಮಿಸುತ್ತಾರೆ. ಧಾರ್ಮಿಕ ಪ್ರವಾಸಿಗರ ಅನುಕೂಲಕ್ಕಾಗಿ ಕೇಂದ್ರ ಸರ್ಕಾರ 12 ರಾಜ್ಯಗಳಲ್ಲಿ ಒಟ್ಟು 19 ಧಾರ್ಮಿಕ ಕೇಂದ್ರಗಳನ್ನು ತೀವ್ರ ಅಭಿವೃದ್ಧಿಗಾಗಿ ಗುರುತಿಸಿದೆ. ಇದರಲ್ಲಿ ಕರ್ನಾಟಕದ ಶೃಂಗೇರಿ ಹಾಗೂ ಗುಲ್ಬರ್ಗಾ ಸೇರಿದೆ. ಗುಲ್ಬರ್ಗಾಕ್ಕೆ ಬರುವ ಭಕ್ತಾದಿಗಳ ಅನುಕೂಲಕ್ಕಾಗಿ ಈ ಕೆಳಕಂಡ ಯೋಜನೆಗಳಿಗೆ 1992-93ನೇ ಸಾಲಿನಲ್ಲಿ ಆರ್ಥಿಕ ನೆರವನ್ನು ಒದಗಿಸಲು ಕೇಂದ್ರ ಸರ್ಕಾರ ತತ್ವಶಃ ಒಪ್ಪಿದೆ. ಗುಲ್ಬರ್ಗಾದಲ್ಲಿ ಯಾತ್ರಿ ನಿವಾಸ ನಿರ್ಮಾಣಕ್ಕಾಗಿ 50 ಲಕ್ಷ ರೂಪಾಯಿಗಳು, ಹಜರತ್ ಖ್ವಾಜಾ ಬಂದಾ ನವಾಜ್ ದರ್ಗಾಕ್ಕೆ ಹೊನಲು ಬೆಳಕಿನ ವ್ಯವಸ್ಥೆಗೆ 10 ಲಕ್ಷ, ಶ್ರೀ ಶರಣ ಬಸವೇಶ್ವರ ದೇವಾಲಯಕ್ಕೆ ಹೊನಲು ಬೆಳಕಿನ ವ್ಯವಸ್ಥೆಗೆ 10 ಲಕ್ಷ ರೂಪಾಯಿಗಳು, ಹಜರತ್ ಖಾಜಾ ಬಂದಾ ನವಾಜ್ ದರ್ಗಾಕ್ಕೆ ಸಮಾಪದಲ್ಲಿ ಸುಲಭ ಶೌಚಾಲಯದ ನಿರ್ಮಾಣಕ್ಕೆ 10 ಲಕ್ಷ, ಒಟ್ಟು 80 ಲಕ್ಷ ರೂಪಾಯಿಗಳು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಈ ಮೇಲ್ಕಂಡ ಯೋಜನೆಗಳಿಗೆ ಈಗಾಗಲೇ ಕೇಂದ್ರ ಪಿ.ಡಬ್ಲ್ಯೂ.ಡಿ. ಇಲಾಖೆ, ಮೈಸೂರ್ ಲ್ಯಾಂಪ್ಸ್, ಸುಲಭ್ ಇಂಟರ್‌ನ್ಯಾಷನಲ್, ಬೆಂಗಳೂರು